ಓ.ಎಸ್. ನಂ. 179/2012

ಡಿ.ಡಬ್ಲ್ಯು: 03 (ಸಣ್ಣ ಓಬಕ್ಕ)

ದಿನಾಂಕ: 14-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ – ಶ್ರೀ ಕೆ ಜೆ ಜಿ ವಾದಿ ಪರ ವಕೀಲರಿಂದ.**

ಈ ದಾವೆಯನ್ನು ಯಾರು ಯಾರ ವಿರುದ್ಧ ಹಾಗೂ ಎಷ್ಟು ವಿಸ್ತೀರ್ಣಕ್ಕೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಹಾಜರು ಪಡಿಸಿದ ತಕರಾರು ಅರ್ಜಿಯನ್ನು ಯಾರು ಹಾಕಿದ್ದಾರೆ ಎಂದರೆ ನಾನೇ ಮಾಹಿತಿ ಕೊಟ್ಟು ಬರೆಸಿರುತ್ತೇನೆ. ಈ ದಾವೆಯನ್ನು ನನ್ನ ತಂದೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಈ ದಾವೆ ನಡೆಯುವಾಗ ತೀರಿಕೊಂಡರು ಎಂದರೆ ಹೌದು. ನನ್ನ ತಂದೆ ಜೀವಂತಾಯಿದ್ದಾಗ 2014 ರಲ್ಲಿ ತನ್ನ ಮಗನಾದ ರಾಜಣ್ಣನವರಿಗೆ ದಾವೆಯನ್ನು ನಡೆಸಲು ಅಧಿಕಾರ ಪತ್ರ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ, ನಾನು ಗಂಡನ ಮನೆಯಲ್ಲಿ ಇದ್ದೆ. ನನ್ನ ತಾಯಿಯನ್ನು ನಾನು ನೋಡಿರುವುದಿಲ್ಲ, ನಾನು 3 ತಿಂಗಳ ಮಗು ಇರುವಾಗ ನನ್ನ ತಾಯಿ ತೀರಿಕೊಂಡಿರುತ್ತಾರೆ. ನನ್ನನ್ನು ನನ್ನ ಚಿಕ್ಕಮ್ಮ ನೋಡಿಕೊಂಡಿರುತ್ತಾರೆ.

ನನ್ನ ತಾಯಿ ಮೃತಪಟ್ಟ ನಂತರ ನನ್ನ ತಂದೆ ಮತ್ತೊಂದು ಮದುವೆಯಾದ ಬಗ್ಗೆ ನನಗೆ ಗೊತ್ತಿಲ್ಲ. ಅವರ 2 ನೇ ಪತ್ನಿಯ ಬಗ್ಗೆ ನಾನು ವಂಶವೃಕ್ಷದಲ್ಲಿ ಕಾಣಿಸಿದ್ದೇನೆ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡಿರುವುದಿಲ್ಲ.

ವಾದಿ1(ಎ) ನನ್ನ ತಂದೆಯ 2 ನೇ ಹೆಂಡತಿ ಎಂದರೆ ಹೌದು. ವಾದಿ1 (ಬಿ) ಯಿಂದ (ಹೆಚ್) ನನ್ನ ತಂದೆಯ 2 ನೇ ಹೆಂಡತಿಯ ಮಕ್ಕಳು ಎಂದರೆ ಹೌದು.

ಗೆದ್ದಲಗಟ್ಟೆ ಮಾರಯ್ಯನಿಗೆ 3 ಜನ ಮಕ್ಕಳು ಎಂದರೆ ಹೌದು. ಅವರುಗಳ ಹೆಸರು ಪಾಲಯ್ಯ , ಓಬಯ್ಯ ಮತ್ತು ಬೋರಯ್ಯ ಎಂದರೆ ಹೌದು. ಪಾಲಯ್ಯನ ಹೆಂಡತಿಯ ಹೆಸರು ಪಾಲಮ್ಮ. ಇವರಿಬ್ಬರಿಗೆ ಶಾಂತಮ್ಮ ಮತ್ತು ರಾಜಮ್ಮ ಎಂಬ ಇಬ್ಬರು ಮಕ್ಕಳು ಎಂದರೆ ಹೌದು. ಪಾಲಮ್ಮ ದಿ: 04-04-1963 ರಂದು ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪನಿಗೆ ದಾನಪತ್ರ ಬರೆದುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದಕ್ಕೆ ಶಾಂತಮ್ಮ ಮತ್ತು ರಾಜಮ್ಮಸಾಕ್ಷಿ ಸಹಿ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ.

ಓಬಯ್ಯನಿಗೆ ಪಾಲಯ್ಯ ಮತ್ತು 2 ನೇ ಪ್ರತಿವಾದಿಯ ಗಂಡ ಓಬಯ್ಯ ಎಂಬ ಮಕ್ಕಳು ಇದ್ದರು ಎಂದರೆ ಹೌದು. ಓಬಯ್ಯನಿಗೆ ದಾವಾ ಆಸ್ತಿ ಸರ್ವೆ ನಂಬರ ಪೈಕಿ 8.66 ಎಕರೆ ಭಾಗದಲ್ಲಿ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಅದನ್ನು ಆತನ ಇಬ್ಬರು ಮಕ್ಕಳು ವಿಭಾಗ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿ: 30-06-1966 ರಂದು 2 ನೇ ಪ್ರತಿವಾದಿಯ ಗಂಡ ಓಬಯ್ಯ ತನ್ನ ಅಣ್ಣನಾದ ಪಾಲಯ್ಯನಿಗೆ ತನ್ನ ಭಾಗಕ್ಕೆ ಬಂದ ದಾವಾ ಆಸ್ತಿ ಸರ್ವೆ ನಂಬರ ಪೈಕಿ

ಓ.ಎಸ್. ನಂ. 179/2012

ಡಿ.ಡಬ್ಲ್ಯೂ: 03 (ಸಣ್ಣ ಓಬಕ್ಕ)

5.79 ಎಕರೆಯನ್ನು ಮಾರಾಟ ಮಾಡಿದ್ದನು ಎಂದರೆ ನನಗೆ ಗೊತ್ತಿಲ್ಲ. ಪಾಲಯ್ಯನಿಗೆ ಕೃಷ್ಣಪ್ಪ ಎಂಬ ಮಗ ಇದ್ದ ಎಂದರೆ ಹೌದು. ಕೃಷ್ಣಪ್ಪ ಆತನ ತಂದೆ ಮೃತಪಟ್ಟ ನಂತರ ತನ್ನ ತಂದೆ ಖರೀದಿ ಮಾಡಿದ್ದ 5.79 ಎಕರೆಯನ್ನು ಹಾಗೂ ತನ್ನ ತಂದೆಯ ಭಾಗಕ್ಕೆ ಬಂದ ಆಸ್ತಿಯ ಎಂದರೆ ಒಟ್ಟು 8-66 ಎಕರೆಯನ್ನು ಕೆ ತಿಪ್ಪೇಸ್ವಾಮಿ ಎನ್ನುವವರಿಗೆ ದಿಃ 30-04-2001 ರಲ್ಲಿ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಈಗ ದಾವಾ ಸ್ವತ್ತಿನಲ್ಲಿ ಓಬಯ್ಯನ ಭಾಗದ ಆಸ್ತಿಯನ್ನು ಸೇರಿಸಿರುವುದಿಲ್ಲ ಎಂದರೆ ನನಗೆ ಗೊತ್ತಾಗುವುದಿಲ್ಲ.

ನನಗೆ ನನ್ನ ತಂದೆಯ ಆಸ್ತಿಯಲ್ಲಿ ಭಾಗ ಇದೆ, ದಾನಪತ್ರದಲ್ಲಿಯೂ ಭಾಗ ಇದೆ ಎಂದರೆ ನನಗೆ ಗೊತ್ತಾಗುವುದಿಲ್ಲ. ಡಿ.ಡಬ್ಲ್ಯೂ: 02 ರವರು ಹೇಳಿಸಿ ಪ್ರತಿವಾದ ಪತ್ರ ಹಾಗೂ ಪ್ರಮಾಣ ಪತ್ರವನ್ನು ಬರೆಸಿರುತ್ತಾರೆ ಎಂದರೆ ಸರಿಯಲ್ಲ. ಈ ದಿನ ಆತನೇ ನನ್ನನ್ನು ಕರೆದುಕೊಂಡು ಬಂದಿರುತ್ತಾನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.